ರಾಜ್ಯದಲ್ಲಿ ಹಣ್ಣು ಹಂಪಲುಗಳ ಸಂಸ್ಕರಣೆ.

1552(2209) ಶ್ರೀ ಪಾಟೀಲ್ ಶಿವಾನಂದ ಸಿದ್ರಾಮಪ್ಪ (ತಿಕೋಟ) :— ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಹಣ್ಣು ಹಂಪಲುಗಳ ಸಂಸ್ಕರಣೆಗಾಗಿ ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಆ) ರಾಜ್ಯದಲ್ಲಿ ತೋಟಗಾರಿಕೆಯಿಂದ ಆಗುವ ಅಂದಾಜು ವಹಿವಾಟು ಮೊತ್ತವೆಷ್ಟು?

ಇ) ಸಂಸ್ಕರಣೆಯನ್ನು ಕೈಗೊಳ್ಳದೇ ಹಾನಿಗೊಳಗಾಗಿರುವ ತೋಟಗಾರಿಕೆ ಬೆಳೆಗಳ ಅಂದಾಜು ಮೊತ್ತವೆಷ್ಟು?

ಶ್ರೀ ಸಿ. ಬೈರೇಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) :—

ಅ) ರಾಜ್ಯದಲ್ಲಿ ಹಣ್ಣು ಹಂಪಲುಗಳ ಸಂಸ್ಕರಣೆ ವಿಷಯದಲ್ಲಿ ಕೆಳಕಾಣಿಸಿದ ಕ್ರಮಗಳನ್ನು ಕೈಗೊಳ್ಳಲಾಗಿದೆ.

1) ಹಣ್ಣು ಸಂಸ್ಕರಣೆ ಹಾಗೂ ರಫ್ತಿಗೆ ಉತ್ತೇಜನ ನೀಡಲು ಸರ್ಕಾರವು ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಮತ್ತು ರಫ್ತು ನಿಗಮವನ್ನು ಸ್ಥಾಪಿಸಿದೆ.

2) ಕೃಷಿ ಮತ್ತು ತೋಟಗಾರಿಕೆ ಬೆಳೆಗಳನ್ನು ಬೆಳೆಯುವುದಕ್ಕೆ ಕರ್ನಾಟಕ ರಾಜ್ಯದಲ್ಲಿ ಹೇರಳವಾದ ಅವಕಾಶವಿರುವುದನ್ನು ಗಮನದಲ್ಲಿಟ್ಟುಕೊಂಡು ಆಹಾರ ಸಂಸ್ಕರಣಾ ಕೈಗಾರಿಕೆಗಳ ಸ್ಥಾಪನೆಗಾಗಿಯೇ (ಕೈತ್ಯಾಗಾರವು ಸೇರಿದಂತೆ) ಅನೇಕ ಪ್ರೋತ್ಸಾಹಕಗಳು ಹಾಗೂ ರಿಯಾಯಿತಿಗಳನ್ನೊಳಗೊಂಡ ಒಂದು ನಿರ್ದಿಷ್ಟ ಹೊಸ ಕಾರ್ಯ ನೀತಿಯನ್ನು ರೂಪಿಸಲಾಗಿದೆ. ಇದರಿಂದ ಕೃಷಿ ತೋಟಗಾರಿಕೆ ಪ್ರಾಧಾನ್ಯ ಪ್ರದೇಶಗಳಲ್ಲಿ ಕೃಷಿ ಸಂಸ್ಕರಣಾ ಕೈಗಾರಿಕೆ (ಕೈತ್ಯಾಗಾರ ಸೇರಿ) ಸ್ಥಾಪನೆಗಾಗಿ ಬಂಡವಾಳ ಹೂಡಿಕೆಗೆ ಉತ್ತೇಜನ ದೊರಕಿಸಿದಂತಾಗಿದೆ.

3) ಹಣ್ಣು ಸಂಸ್ಕರಣೆ ತಾಂತ್ರಿಕತೆಯನ್ನು ಪ್ರಚಾರ ಮಾಡಲು ತರಬೇತಿ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ.

ಆ) ಸುಮಾರು 5000 ಕೋಟಿ ರೂ.ಗಳು

ಇ) ಉತ್ಪಾದನೆಯ ಶೇಕಡ 25 ರಿಂದ 30 ಪಾಲು ಹಾನಿಗೊಳಗಾಗುತ್ತವೆ. (ಸುಮಾರು 1250 ರಿಂದ 1500 ಕೋಟಿ ರೂ.ಗಳು)